ರಾಜ್ಯದಲ್ಲಿರುವ ರುದ್ರಭೂಮಿಗಳ ಅಭಿವೃದ್ಧಿ

359 - ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದ ನಗರಗಳಲ್ಲಿರುವ ರುದ್ರಭೂಮಿಗಳ ದುರವಸ್ಥೆ ಸರ್ಕಾರದ ಗಮನಕ್ಕೆ ಬಂದಿದೆಯೆ.*

ಆ) *ಹಾಗಿದ್ದಲ್ಲಿ, ರುದ್ರಭೂಮಿಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು.*

ಶ್ರೀ ಕೆ. ಜಿ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಮೈಸೂರು ನಗರಕ್ಕೆ ಕಾವೇರಿ ಕುಡಿಯುವ ನೀರಿನ ಯೋಜನೆ

357 - ಶ್ರೀ ಕೆ. ಹರ್ಷಕುಮಾರ್‌ಗೌಡ (ಚಾಮರಾಜ): ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ನಗರಕ್ಕೆ ಆರೂವರೆ ಕೋಟಿ ರೂ.ಗಳ ವೆಚ್ಚದಲ್ಲಿ ಕಳೆದ ವರ್ಷ ಪ್ರಾರಂಭಿಸಿದ ಕಾವೇರಿ ನೀರಿನ ಯೋಜನೆಯ ಕಾರ್ಯ ಯಾವ ಹಂತದಲ್ಲಿದೆ?*

ಆ) *ಈ ಯೋಜನೆಯ ಕಾರ್ಯವನ್ನು ಯಾವಾಗ ಪೂರ್ಣಗೊಳಿಸಲಾಗುವುದು?*

ಇ) *ಈ ಯೋಜನೆಯ ಅನುಷ್ಠಾನದಿಂದ ಮೈಸೂರು ನಗರದ ಜನತೆಗೆ ಪೂರ್ಣ ಪ್ರಮಾಣದಲ್ಲಿ ನೀರನ್ನು ಒದಗಿಸಲು ಸಾಧ್ಯವೇ?*

ಶ್ರೀ ಕೆ. ಜಿ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಈ ಯೋಜನೆಯು ಸಿ.ಪಿ.ಹೆಚ್.ಇ.ಇ.ಒ. ನವದೆಹಲಿಯಿಂದ ಜನವರಿ 1991ರಲ್ಲಿ ತಾಂತ್ರಿಕ ಒಪ್ಪಿಗೆ ಪಡೆದಿದೆ. ಕೊಳವೆ ಮಾರ್ಗಕ್ಕೆ ಟೆಂಡರ್‌ಗಳು ಅಂತಿಮ ಘಟ್ಟದ ನಿರ್ಣಯದಲ್ಲಿದೆ. 3 ಆರ್.ಸಿ.ಸಿ., ಮೇಲ್ಮಟ್ಟದ ಜಲಸಂಗ್ರಹಗಾರಗಳನ್ನು ಕಟ್ಟುವ ಕೆಲಸವನ್ನು ತೆಗೆದುಕೊಳ್ಳಲಾಗಿದೆ. ಬಲಮುರಿ ಪಿಕಪ್‌ನಿಂದ ಬೆಳಗೊಳಕ್ಕೆ 900 ಮಿ.ಮೀ. ವ್ಯಾಸದ ಕೊಳವೆ ಮಾರ್ಗದ ಕೆಲಸ ಪ್ರಗತಿಯಲ್ಲಿದೆ.

ಆ) ಮೇ 1993 ರೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು.

ಇ) ಸಾಧ್ಯವಿದೆ

ತೋಟದ ಬೆಳೆಗಾರರ ಸಂಘದಿಂದ ಮಾರಾಟ ಮಳಿಗೆಗಳನ್ನು ರಾಜ್ಯದ ಎಲ್ಲೆಡೆಗಳಲ್ಲಿಯೂ ತೆಗಯುವ ಬಗ್ಗೆ

372 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ತೋಟದ, ಬೆಳೆಗಾರರ ಸಂಘವು ಎಲ್ಲೆಲ್ಲಿ ತನ್ನ ಮಳಿಗೆಗಳನ್ನು ತೆರೆದಿದೆ? ಮಳಿಗೆಗಳು ಇರುವ ವಿಳಾಸ ಹಾಗೂ ಇದನ್ನು ನಡೆಸುತ್ತಿರುವವರ ಹೆಸರುಗಳ ಬಗ್ಗೆ. ವಿವರಗಳನ್ನು ನೀಡುವುದು.*

ಆ) *ಈ ಮಳಿಗೆಗಳನ್ನು ಯಾವ ಅರ್ಹತೆಯ ಮೇರೆಗೆ ಹಂಚಲಾಗುವುದು?*

ಇ) *ಇದೇ ರೀತಿಯ ಮಳಿಗೆಗಳನ್ನು ರಾಜ್ಯದ ಇತರೆಡೆಗೆಳಲ್ಲಿ ಅದರಲ್ಲೂ ಮುಖ್ಯವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸ್ಥಾಪಿಸುವ ವಿಚಾರ ಸರ್ಕಾರದ ಮುಂದಿದೆಯೇ?*

ಈ) *ಹಾಗಿಲ್ಲದಿದಲ್ಲಿ, ಕಾರಣವೇನು?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):